

## ಮಹಾಪ್ರಭುವಿನ ಗುಲಾಮು

**ಬಾ**ದಶಹ ಹಜರತ್ ಇಬ್ರಾಹಿಂ ಎಂಬುವವನು ಗುಲಾಮರನ್ನು ಖರೀದಿಸುತ್ತಿದ್ದನು. ಒಬ್ಬ ಗುಲಾಮನನ್ನು ಕರೆದು "ಹ್ನೂ, ನಿನ್ನ ಹೆಸರೇನು" ಎಂದು ಕೇಳಿದನು. ಗುಲಾಮನು ತುಂಬ ನಮ್ರತೆಯಿಂದ, "ನೀವು ಯಾವ ಹೆಸರಿನಲ್ಲಿ ಕರೆಯುತ್ತೀರೋ ಅದೇ ನನ್ನ ಹೆಸರು" ಎಂದನು.

ಬಾಹಶಹನು, "ಓಹೋ, ಹಾಗೋ. ಸರಿ, ನೀನು ಏನೇನು ಉಣ್ಣುವೆ?" ಎಂದನು.

ಗುಲಾಮ : "ನೀವು ಏನು ಕೊಡುತ್ತೀರೋ ಅದನ್ನೇ ತಿನ್ನುವೆ."

ಬಾಹಶಹ : "ನೀನು ಎಂತಹ ಉಡುಪನ್ನು ಧರಿಸಲು ಇಷ್ಟಪಡುವೆ?"

ಗುಲಾಮ : "ನೀವೇನು ಕೊಡುವಿರೋ ಅದನ್ನೇ ಉಡುವೆ"

ಬಾದಶಹ : "ಸರಿ, ಮತ್ತೆ ನೀನು ಯಾವ ಕೆಲಸ ಮಾಡುವೆ?"

ಗುಲಾಮ : "ನೀವು ಕೊಟ್ಟ ಕೆಲಸ."

ಬಾದಶಹ : "ಹಾಗಿದ್ದರೆ, ನಿನ್ನ ಇಚ್ಛೆಯಾದರೂ ಏನಿದೆ?"

ಗುಲಾಮ : "ಗುಲಾಮನಿಗೆಂದಾದರೂ ಸ್ವಂತ ಇಚ್ಛೆಯಿದೆಯೇ ಸ್ವಾಮಿ?"

ಗುಲಾಮನ ಮಾತು ಕೇಳಿ ಬಾದಶಹನ ಹೃದಯದ ಕಣ್ಣು ತೆರೆಯಿತು. ಆಗ ಬಾದಶಹನು ಬಹಳ ದೈನ್ಯತೆಯಿಂದ ಕಂಬನಿದುಂಬಿ ಗುಲಾಮನನ್ನು ಕುರಿತು ಹೀಗೆಂದನು :

"ನಿನ್ನ ಮಾತಿನಿಂದ ನನಗೆ ಜ್ಞಾನೋದಯವಾಗಿದೆ. ನೀನೇ ನನಗೆ ಗುರು. ಕಾರಣ ನೀನು ಆ ಮಹಾಪ್ರಭುವಿನ ಗುಲಾಮನಾಗುವ ಪರಿಯನ್ನು ಕಲಿಸಿರುವೆ."

◆